ನಡುವಿಗೆ ತಂದುಕೊಂಡ. 'ಥೂ' ಎಂದು ಮಂತ್ರಿಸಿ ಅದನ್ನು ದೂರ ಎಸೆದ. ತಕ್ಷಣ ಏನಾಯಿತು ಎಂದು ತಿಳಿಯದ ಹಾಗೆ ಸೌಮ್ಯ ಮಂಕಾಗಿ ಹೋದಳು. ಆಕೆ ಸಣ್ಣಗೆ ಬಿಕ್ಕಳಿಸುತ್ತ 'ಕುಪ್ಪಣ್ಣ ಭಟ್ರೇ, ನಾನು ಖಂಡಿತ ನಿಮ್ಮ ಜೊತೆ ಬರುತ್ತೇನೆ, ನಾನು ನಿಮ್ಮ ಜೊತೆ ಖಂಡಿತ ಬರುತ್ತೇನೆ' ಎಂದು ಭಟ್ಟನ ಹಿಂದೆ ಹೊರಟೇ ಬಿಟ್ಟಳು.

'ಶಹಬ್ಬಾಸ್ ಹಾಗೆ ಬಾ' ಎಂದು ಹೇಳಿದ ಕುಪ್ಪಣ್ಣ, 'ಎಲ್ಲಿ ನಿನ್ನ ಕೈ ಕೊಡು' ಎಂದು ಸೌಮ್ಯಳ ಬಲದ ಕೈಯನ್ನು ಬಲವಾಗಿ ಹಿಡಿದ. ನಿಧಾನವಾಗಿ ಅವಳನ್ನು ಪಕ್ಕದ ಹಾಡಿಯ ಕಡೆಗೆ ಕರೆದುಕೊಂಡು ಹೋಗಲು ಮುಂದಾದ. ಇದನ್ನು ದೂರದಿಂದ ಗ್ರಹಿಸಿದ ಪರ್ದೇಶಿ ಕುಪ್ಪಣ್ಣ ಭಟ್ಟನ ಇತಿಹಾಸ ತಿಳಿದಿದ್ದರಿಂದ ಈಗ ಈ ತಾಯಿಗೆ ಈ ಬ್ರಾಹ್ಮಣ ಏನೋ ಮಾಡುತ್ತಾನೆ ಎಂದು ಆತಂಕಗೊಂಡ. ಆತ ಉಳುಮೆಯಲ್ಲಿದ್ದ ಕೋಣಗಳನ್ನು ಗದ್ದೆಯಲ್ಲೇ ಬಿಟ್ಟು, 'ದೇವರೇ ಆ ಪಾಪದ ಹೆಣ್ಮಗಳನ್ನು ಕಾಪಾಡು' ಎನ್ನುತ್ತಾ ಗೋವಿಂದ ಭಟ್ಟರ ಅಂಗಳದಾಚೆ ಉಸಿರು ಬಿಗಿಹಿಡಿದು ಓಡತೊಡಗಿದ.

ಗೋವಿಂದ ಭಟ್ಟರು ಬೆಳಗ್ಗಿನ ಉಪಾಹಾರ ತೀರಿಸಿ ಹೆಂಡತಿಯೊಂದಿಗೆ ಪಟ್ಟಾಂಗ ಹೊಡೆಯುತ್ತಾ ಚಾವಡಿಯಲ್ಲಿ ಕುಳಿತಿದ್ದರು. ಅವರು ಜೀವಬಿಟ್ಟು ಓಡಿ ಬರುವಂತೆ ಬರುತ್ತಿದ್ದ ಪರ್ದೇಶಿಯನ್ನು ನೋಡಿದವರೇ ಆತಂಕಗೊಂಡು 'ಇಂದಜೇ ಇಂಬೆ ಜಾಯೆ ಬಲ್ತೊಂದು ಬರೊಂದುಲ್ಲೆ ಸೂಲ' (ಇವಳೇ ಅವನು ಯಾಕೆ ಓಡಿಕೊಂಡು ಬರುತ್ತಿದ್ದಾನೆ ಎಂದು ವಿಚಾರಿಸು) ಎಂದು ಹೆಂಡತಿಗೆ ಹೇಳಿದರು. ಶಂಕರಿ ಅಮ್ಮ ಅವನನ್ನು ಮಾತನಾಡಿಸುವ ಮೊದಲೇ ಪರ್ದೇಶಿ ಏದುಸಿರು ಬಿಡುತ್ತಾ ಗೋವಿಂದ ಭಟ್ಟರ ಇದಿರು ನಿಂತು, 'ಅಯ್ಯಾ, ಆ ಹೆಣ್ಮಗಳನ್ನು ದೇವರೇ ಕಾಪಾಡಬೇಕು' ಎಂದು ನಡೆದ ವಿಷಯಗಳನ್ನೆಲ್ಲ ಹೇಳಿದ. ಭಟ್ಟರಿಗೆ ದಿಗಿಲಾಯಿತು. 'ಛೆ! ಕುಪ್ಪಣ್ಣ ಇಂಥ ನೀಚ ಕೆಲಸಕ್ಕೆ ಇಳಿಯುವುದಾದರೆ ಇನ್ನು ಸುಮ್ಮನಿರುವುದಲ್ಲ' ಎಂದುಕೊಂಡ ಅವರು 'ಸ್ವಲ್ಪ ಒಳಗಿನಿಂದ ಕುಂಕುಮ ತಾ' ಎಂದು ಹೆಂಡತಿಗೆ ಆಜ್ಞಾಪಿಸಿದರು. ಶಂಕರಿ ಅಮ್ಮ ನೀಡಿದ ಕರಂಡಕದಿಂದ ಒಂದು ಚಿಟಿಕೆ ಕುಂಕುಮ ತೆಗೆದು ಮಂತ್ರಿಸಿದ ಅವರು 'ಥೂ' ಎಂದು ಅದನ್ನು ಊದಿದರು. 'ನೀನು ಹೋಗು ಪರ್ದೇಶಿ. ಸೌಮ್ಯಳಿಗೆ ಏನೂ ಆಗುವುದಿಲ್ಲ,' ಎಂದು ಧೈರ್ಯ ಹೇಳಿದ ಅವರು, 'ನಾನೂ ಬರ್ತೇನೆ ಸೌಮ್ಯಳ ಮನೆಗೆ' ಎನ್ನುತ್ತಾ ಹೊರಟೇ ಬಿಟ್ಟರು.

ಪರ್ದೇಶಿ ಓಡುತ್ತಲೇ ಹಿಂದಿರುಗಿ ಬಂದಾಗ ನಿದ್ದೆಯಿಂದ ಎಚ್ಚೆತ್ತ ಹಾಗೆ ಮಂಕಾಗಿದ್ದ ಸೌಮ್ಯ ಹಾಡಿಯಿಂದ ಅವಸರವಾಗಿ ತನ್ನ ಮನೆಯಾಚೆ ಬರುವುದು ಕಾಣಿಸಿತು. ಆಕೆ ಮನೆಯಂಗಳದ ತನಕ ಬರುವುದನ್ನೇ ಕಾಯುತ್ತಿದ್ದ ಪರ್ದೇಶಿ 'ಅಮ್ಮಾ ಏನೂ ಆಗಿಲ್ಲ ತಾನೇ?' ಎಂದು ಆತಂಕದಲ್ಲೇ ಪ್ರಶ್ನಿಸಿದ. ಸೌಮ್ಯ 'ಇಲ್ಲಪ್ಪ, ದೇವರು ಕಾಪಾಡಿದ. ಆ ಭಟ್ಟ ನನ್ನ ಮೈಮೇಲೆ ಕೈ ಹಾಕಲು ಮುಂದಾದಾಗ ಹಾವು ಹಾವು ಎಂದು ಬೊಬ್ಬೆ ಹೊಡೆಯುತ್ತಾ ಓಡಿಹೋದ' ಎಂದಳು. ಸ್ವಲ್ಪ ಹೊತ್ತಿನಲ್ಲಿ ಸೌಮ್ಯಳಿದ್ದಲ್ಲಿಗೆ ಬಂದ ಗೋವಿಂದ ಭಟ್ಟರು ಸೌಮ್ಯಳನ್ನು ಹೇಗೆ ಸಂತೈಸುವುದು ಎಂದು ತಿಳಿಯದೇ 'ಹೆದರಿಕೊಳ್ಳಬೇಡ ಸೌಮ್ಯ. ಆ ಕುಪ್ಪಣ್ಣ ಭಟ್ಟ ಇನ್ನು ಈ ಭೂಮಿಯಲ್ಲಿ ಹೆಚ್ಚು ದಿನ ಉಳಿಯಲಾರ. ಅವನ ಕುಟ್ಟಿಚ್ಚಾತ ದೈವ ಅವನನ್ನೇ ಹಿಡಿದು ತಿನ್ನುವ ಹಾಗೆ ಮಾಡುತ್ತೇನೆ ನೋಡು' ಎಂದು ಸಂತೈಸಿ ಹಿಂದಿರುಗಿದರು.

ಸುಮಾರು ಎರಡು ತಿಂಗಳ ಮೇಲೆ ಕುಪ್ಪಣ್ಣ ಭಟ್ಟನಿಗೆ ಪಕ್ಷಾಘಾತವಾಯಿತು. ಆತ ಅದರಲ್ಲಿ ನಾಲ್ಕಾರು ತಿಂಗಳು ನರಳಿ ಕೊನೆಯುಸಿರು ಎಳೆದ.

ಈ ಘಟನೆಗಳು ಇನ್ನೇನು ಸೌಮ್ಯಳ ಮನಸ್ಸಿಂದ ಮಾಸಿ ಹೋಗುತ್ತವೆ ಎನ್ನುವಾಗ ಅದೊಂದು ದಿನ ಪೇಟೆಗೆ ಹೋಗಿ ಮರಳುತ್ತಿದ್ದ ಗೋವಿಂದ ಭಟ್ಟರು ತಮ್ಮ ಮನೆಯಾಚೆ ತಲುಪಲು ಸ್ವಲ್ಪ ಹೊತ್ತು ಇರಬೇಕೆನ್ನುವಷ್ಟರಲ್ಲಿ ಮೋಡ ಆಕಾಶದಲ್ಲಿ ಕವಿದು, ಮಿಂಚು ಮಿಂಚಿ, ಗುಡುಗು ಗುಡುಗಿ, ಭೂಮಿ ನಡುಗಲಾರಂಭಿಸಿತು. ಯಾವತ್ತೂ ಸಿಡಿಲು ಮಳೆಗೆ ಎದೆಗುಂದದ ಗೋವಿಂದ ಭಟ್ಟರು ಆ ದಿನ ತುಸು ಹೆದರಿ 'ಕೃಷ್ಣ ಕೃಷ್ಣ' ಎಂದು ದೇವರನ್ನು ಧ್ಯಾನಿಸುತ್ತಾ ನಡಿಗೆಯ ವೇಗವನ್ನು ಇಮ್ಮಡಿಗೊಳಿಸಿದರು. ಅಷ್ಟರಲ್ಲಿ ಆಕಾಶದ ತುಂಬ ಕತ್ತಲು ಆವರಿಸಿದಂತಾಗಿ 'ಧೋ' ಎಂದು ಮಳೆ ಸುರಿಯಲಾರಂಭಿಸಿತು. ಭಟ್ಟರು ಎಷ್ಟು ವೇಗವಾಗಿ ಹೆಜ್ಜೆ ಹಾಕಿದರೂ ತಾನು ಮನೆ ತಲುಪುವುದು ಕಷ್ಟ ಎಂದುಕೊಂಡರು. ಜೊತೆಗೆ ಬೆಳಕೂ ಇಲ್ಲ ಎಂದು ಆತಂಕಗೊಂಡರು. ಆಗ ಅವರಿಗೆ ದಾರಿಯಲ್ಲಿ ಸಿಗುವ ಸೌಮ್ಯಳ ಮನೆಯಲ್ಲಾದರೂ ಆಶ್ರಯ ಪಡೆಯೋಣ ಎಂಬ ಭಾವ ಬಂತು. ಅವರು ಸೌಮ್ಯಳ ಮನೆ ಕಡೆಗೆ ಹೆಜ್ಜೆ ಹಾಕಿ ಅಂಗಳ ತಲುಪಿದಾಗ ಸೌಮ್ಯಳ ಮನೆಬಾಗಿಲು ಹಾಕಿತ್ತು. ಅಷ್ಟರಲ್ಲೇ ಅವರ ದೇಹವನ್ನು ಮಳೆಯ ನೀರು ಪೂರ್ತಿ ಒದ್ದೆ ಮಾಡಿ, ಒಳ ಉಡುಪುಗಳು ಎದ್ದು ತೋರುವಂತಾಗಿತ್ತು. ಈ ವೇಷದಲ್ಲಿ ತಾನು ಸೌಮ್ಯಳಿಗೆ ಹೇಗೆ ಮುಖ ತೋರಿಸುವುದೆಂದು ಆತಂಕಗೊಂಡ ಭಟ್ಟರು ಮುಜುಗರಪಡುತ್ತಲೇ ಸೌಮ್ಯಳ ಮನೆಬಾಗಿಲನ್ನು ಮೆತ್ತಗೆ ಬಡಿದರು.

ಒಳಗೆ ಗುಬ್ಬಚ್ಚಿಯ ಹಾಗೆ ಕುಳಿತು ಸಿಡಿಲು ಮಳೆಗೆ ಆತಂಕಗೊಂಡಿದ್ದ ಸೌಮ್ಯಳಿಗೆ ಭಟ್ಟರು ಬಾಗಿಲು ಬಡಿಯುವುದು ಕೇಳಿಸಲಿಲ್ಲ. ಆಗಲೇ ಅವಳಮ್ಮ ಒಳಗಿನ ಕೋಣೆಗೆ ಹೋಗಿ ನೆಲದಲ್ಲಿ ಮುದುಡಿ ಮಲಗಿದ್ದರು. ಇದರಿಂದ ತನ್ನ ಜೊತೆ ಯಾರೂ ಇಲ್ಲದೇ ತಲ್ಲಣಗೊಂಡಿದ್ದ ಸೌಮ್ಯಳಿಗೆ ಇದ್ದಕ್ಕಿದ್ದ ಹಾಗೆ ಬಾಗಿಲು ಬಡಿದ ಶಬ್ದ ಜೋರಾಗಿ ಕೇಳಿಸಿದಂತಾಯಿತು. ಆಕೆಗೆ ಬಾಗಿಲು ತೆಗೆಯಲು ಭಯವಾಗಿ ಮೆಲ್ಲನೆ ಕಿಟಕಿಯಿಂದ ಇಣುಕಿ ನೋಡಿದರೆ, ಹೊರಗೆ ಪೂರ್ತಿ ಒದ್ದೆಯಾಗಿ ಸಣ್ಣಗೆ ನಡುಗುತ್ತಿದ್ದ ಮನುಷ್ಯಾಕೃತಿಯೊಂದು ಕಾಣಿಸಿತು. ಆಕೆ ಹೆದರುತ್ತಲೇ ಆ ವ್ಯಕ್ತಿ ಯಾರು ಇರಬಹುದು ಎನ್ನುವುದು ತಿಳಿಯದೇ, 'ಯಾರು ನೀವು?' ಎಂದು ಪ್ರಶ್ನಿಸಿದಳು. ಭಟ್ಟರು, 'ನಾನು ಗೋವಿಂದ ಭಟ್ಟ, ಹೆದರಬೇಡ ಬಾಗಿಲು ತೆಗಿ' ಎನ್ನುತ್ತಿದ್ದಂತೆ 'ಓ ನೀವಾ? ಅಯ್ಯೋ ಮಳೆಗೆ ಪೂರ್ತಿ ಒದ್ದೆಯಾಗಿದ್ದೀರಲ್ಲ?' ಎಂದು ಅವರನ್ನು ಸೌಮ್ಯ ಒಳಗೆ ಕರೆದಳು. ಅವರು ಒಳಗೆ ಬರುತ್ತಿದ್ದ ಹಾಗೆ ಪೂರ್ತಿ ಒದ್ದೆಯಾಗಿ ಚಳಿಯಲ್ಲಿ ನಡುಗುತ್ತಿದ್ದ ಗೋವಿಂದಭಟ್ಟರನ್ನು ನೋಡಿ ಆಕೆ ಆತಂಕಗೊಂಡಳು.

ಸೌಮ್ಯಳಿಗೆ ತಕ್ಷಣ ಏನು ಮಾಡುವುದೆಂದು ಹೊಳೆಯಲಿಲ್ಲ. ಆದರೆ ತನ್ನ ಗಂಡನು ಮನೆಗೆ ಬಂದಾಗ ಉಡುವ ಪಂಚೆ ಮತ್ತು ಪಾಣಿಪಂಚೆ ಅವಳ ನೆನಪಿಗೆ ಬಂತು. ಅದನ್ನು ಹಿಡಿದುಕೊಂಡು ಬಂದ ಅವಳು, 'ನೀವು ಈ ಕುರ್ಚಿಯಲ್ಲಿ ಕುಳಿತುಕೊಳ್ಳಿ. ನಾನು ಈ ಪಾಣಿಪಂಚೆಯಿಂದ ನಿಮ್ಮ ತಲೆಯನ್ನು ಒರಸುತ್ತೇನೆ' ಎಂದು ಭಟ್ಟರನ್ನು ಕುರ್ಚಿಯಲ್ಲಿ ಕೂಡಿಸಿ ಅವರ ತಲೆಯನ್ನು ಒರೆಸತೊಡಗಿದಳು. ಭಟ್ಟರು ಪುಟ್ಟ ಮಗುವಿನ ಹಾಗೆ ಸೌಮ್ಯಳಿಂದ ತನ್ನ ತಲೆ ಮತ್ತು ಬೆನ್ನು ಒರಸಿಕೊಳ್ಳುತ್ತಿದ್ದಾಗ ಸೌಮ್ಯಳ ಬಿಸಿಯುಸಿರು ಅವರ ಮೂಗಿಗೆ ಬಡಿಯತೊಡಗಿತು. ಅಷ್ಟರಲ್ಲಿ ಪುಟ್ಟ ಸರೋವರದಲ್ಲಿ ಏಳುವ ಸಣ್ಣ ತೆರೆಗಳ ಹಾಗೆ ಸೌಮ್ಯಳ ಎದೆಯ ಪರ್ವತಗಳು ಭಟ್ಟರ ಕಣ್ಣುಗಳಿಗೆ ತೆರೆತೆರೆದು ಅಪ್ಪಳಿಸಿದಂತಾಯಿತು. ಅವರಿಗೆ ಈ ಜೀವವನ್ನು ಹಿಡಿದಪ್ಪಿದರೆ ಹೇಗೆ ಎಂದು ಅನಿಸುವಷ್ಟರಲ್ಲೇ ಅವರು ಸೌಮ್ಯಳನ್ನು ಬಿಗಿದಪ್ಪಿದರು.

ಇದನ್ನು ಸೌಮ್ಯ ನಿರೀಕ್ಷಿಸದಿದ್ದರೂ ಅದು ಅವಳಿಗೆ ಆಪ್ಯಾಯಮಾನವಾದಂತಾಯಿತು. ಇಂಥ ಕನಸು ಅಥವಾ ಕಲ್ಪನೆ ಅವಳ ಮನಸ್ಸಿನಲ್ಲಿ ಇಲ್ಲದಿದ್ದರೂ ಅವಳ ದೇಹ ಆಗಲೇ ಅದನ್ನು ಬಯಸಿದಂತಿತ್ತು. ಆಕೆಗೆ ತಿಳಿಯದೆ ಅವಳ ಕೈಗಳೂ ನಡುಗುವ ಭಟ್ಟರ ದೇಹವನ್ನು ಅಪ್ಪಿಕೊಂಡು ಬೆಚ್ಚಗಾಗಿಸಿತು.

ಮುಂದೆ ಏನಾಯಿತು ಎನ್ನುವುದು ಇಬ್ಬರಿಗೂ ತಿಳಿಯದೆ ಇಬ್ಬರೂ ಪರಸ್ಪರ ಒಬ್ಬರೊಳಗೆ ಇನ್ನೊಬ್ಬರು ನುಗ್ಗಿದಂತಾದರು. ಹೊರಗಿನ ಗುಡುಗು ಸಿಡಿಲು ಮಿಂಚು ಇನ್ನೇನು ನಿಂತಿತು ಎನ್ನುವಂತಾದಾಗ ಇಬ್ಬರೂ ಪರಸ್ಪರರ ಅಪ್ಪುಗೆಯಿಂದ ಬಿಡಿಸಿಕೊಂಡು ಮೇಲೆದ್ದರು.

ಅಷ್ಟರಲ್ಲಿ ಭಟ್ಟರು ತೀರಾ ಇಳಿದುಹೋಗಿದ್ದರು. ಅವರು ಮುಜುಗರದಲ್ಲಿ 'ಸೌಮ್ಯ ನಾನು ತುಂಬಾ ದುಡುಕಿಬಿಟ್ಟೆ, ಕ್ಷಮಿಸು' ಎಂದು ಕೈಮುಗಿದರು. ಸೌಮ್ಯಳಿಗೆ ಏನು ಆಡಬಹುದೆಂದು ತಿಳಿಯದೆ ನಾಚಿ ಒಳಗೆ ನಡೆದಳು. ನಿಧಾನವಾಗಿ ಬಟ್ಟೆ ಬದಲಾಯಿಸಿಕೊಂಡು ಬಂದ ಆಕೆ, 'ಇಲ್ಲ, ನೀವೇನೂ ತಪ್ಪು ಮಾಡಿಲ್ಲ' ಎಂದು ಪಿಸುಗುಟ್ಟಿ, 'ಈಗ ಮಳೆ ಬಿಟ್ಟಿದೆಯಾದರೂ ನಿಮ್ಮ ಬಟ್ಟೆಗಳೆಲ್ಲ ಒದ್ದೆಯಾಗಿವೆಯಲ್ಲ, ಅದನ್ನೇ ಉಟ್ಟುಕೊಂಡು ಹೇಗೆ ಹೋಗುತ್ತೀರಿ ಮನೆಗೆ?' ಎಂದು ಪ್ರಶ್ನಿಸಿದಳು.

ಭಟ್ಟರು 'ಹೌದಲ್ಲ' ಎಂದು ಯೋಚಿಸಿ, 'ನಾನು ಹೆಚ್ಚು ಹೊತ್ತು ಇಲ್ಲಿ ಕಳೆಯುವುದು ಸರಿಯಲ್ಲ' ಎನ್ನುತ್ತಾ 'ಒದ್ದೆಯಾದ ಬಟ್ಟೆಗಳೆಲ್ಲ ಇಲ್ಲೇ ಇರಲಿ ಸೌಮ್ಯ. ನಾಳೆ ಬೆಳಗ್ಗೆ ನೀನು ಬರುವಾಗ ಅವುಗಳನ್ನು ತಾ. ಇನ್ನೊಂದು ಟವೆಲು ಇದ್ದರೆ ಕೊಡು. ಅದನ್ನು ತಲೆಗೆ ಹಾಕಿಕೊಂಡು ನೀನು ಕೊಟ್ಟ ಪಂಚೆಯಲ್ಲೇ ಮನೆಗೆ ಹೋಗುತ್ತೇನೆ' ಎಂದು ಎದ್ದು ನಿಂತರು.

ಸೌಮ್ಯ ಒಳಗೆ ನಡೆದು ಅಲ್ಲಿ ಇಲ್ಲಿ ಹುಡುಕಾಡಿ